are recoverable by authorities-department other than Commercial Tax Department. Revenue Department-as arrears of land revenue. ಈಗಾಗಲೇ ಡಿಕ್ರಿಯಾಗಿ ನಾವು ರಿಕವರಿ ಮಾಡುವುದಕ್ಕೆ ಪ್ರಯತ್ನಿಸುತ್ತಿರುವ ೭೪ ಕೋಟಿಯಲ್ಲಿ ೧೧ ಕೋಟಿ ೩೩ ಲಕ್ಷ ಇದಕ್ಕೆ ಸಂಬಂಧಪಟ್ಟಿದ್ದು. ಇದಾದ ಮೇಲೆ amount recoverable by Officers of the Commercial Tax Department and action taken for recovery-23 crores 19 lakhs.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ನಾನು ಕೇಳಿದ್ದು ಲೇಟೆಸ್ಟ್ ಆಗಿ ಅಂದರೆ ಮಾರ್ಚ್ ಎಂಡಿಂಗ್‌ಗೆ ಇರುವ ಬಾಕಿ ಎಷ್ಟು ಎನ್ನುತಕ್ಕಂಥಾದ್ದು. ಆಮೇಲೆ ಇದು ಸುಪ್ರೀಂ ಕೋರ್ಟಿನಿಂದ ತಡೆಯಾಜ್ಞೆ ಬಂದ ಮೇಲೆ ೭೪ ಕೋಟಿ ರೂಪಾಯಿಗಳನ್ನು ಕಾಫಿ ಬೋರ್ಡಿನವರು ಕೊಡಬೇಕೆಂದು ತೀರ್ಮಾನವಾಗಿದೆ. ಈ ೭೪ ಕೋಟಿ ರೂಪಾಯಿಗಳು ಕೈ ಬಿಡಬೇಕೆಂದು ಏನಾದರೂ ನಿರ್ಧಾರವಾಗಿದೆಯೋ ದಯಮಾಡಿ ತಿಳಿಸಿ ? ಆಮೇಲೆ ಇನ್ನು ಉಳಿದಂತಹ ಬಾಕಿ ಹಣವನ್ನು ವಸೂಲಿ ಮಾಡಲಂ ಏನು ಸ್ಟೆಪ್ಸ್ ತೆಗೆದುಕೊಂಡಿದ್ದೀರಿ. ? ಈ ಹಣವನ್ನು ಬೇಗ ವಸೂಲಿ ಮಾಡಿದರೆ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸ್ವಲ್ಪ ಸಹಾಯವಾಗಬಹುದು. ಸಣ್ಣ ಪುಟ್ಟ ಜನತಾ ಹೌಸಿಂಗ್‌ಗಳ ಮೇಲೆ ಲ್ಯಾಂಡ್ ರೆವಿನ್ಯೂ ಇರುವಂತಾದ್ದನ್ನು ನಿರ್ಜೀವನೇ ಇಸವಿಯಿಂದ ರೆವಿನ್ಯೂ ಇಲಾಖೆಯವರು ವಸೂಲಿ ಮಾಡುತ್ತಿದ್ದಾರೆ. ಒಬ್ಬ ರೈತನ ಮೇಲೆ ಕೇವಲ ೧೦-೨೦ ರೂಪಾಯಿಗಳು ಇರುತ್ತದೆ. ಅದನ್ನೇ ವಸೂಲಿ ಮಾಡಲಾಗುವುದಿಲ್ಲ. ಇನ್ನು ಈ ಲಕ್ಷಾಂತರ ರೂಪಾಯಿಗಳನ್ನು ವಸೂಲಿ ಮಾಡುವುದಕ್ಕೆ ತಾವೇನು ಕ್ರಮ ತೆಗೆದುಕೊಂಡುರಿಕವರಿ ಮಾಡುತ್ತೀರಿ ?

ಶ್ರೀ ರಾಮಕೃಷ್ಣ ಹೆಗಡೆ — ಮಾನ್ಯ ಅಧ್ಯಕ್ಷರೇ, ಅವರ ಉಪ ಪ್ರಶ್ನೆಗೆ ಉತ್ತರವಾಗಿ ೩೧-೩-೧೯೮೮ಕ್ಕೆ ಎಷ್ಟಾಗುತ್ತದೆಂದು ಹೇಳಿದ್ದೇನೆ. ಈಗ ಲೇಟೆಸ್ಟ್ ಫಿಗರ್ಸ್ ನಮಗೆ ಜೂನ್ ಕೊನೆಗೆ ಗೊತ್ತಾಗುತ್ತದೆ. ಅದರೊಳಗೆ ಗೊತ್ತಾಗುವುದಿಲ್ಲ ಸಾಮಾನ್ಯವಾಗಿ ಕಾಫಿ ಬೋರ್ಡ್‌ನವರು ಕೊಡಬೇಕಾಗಿರುವಂತದ್ದನ್ನು ಬಿಟ್ಟರೆ ಉಳಿದಿದ್ದು ಒಂದು ೩೦-೪೦ ಕೋಟಿ ರೂಪಾಯಿಗಳು. ಯಾರು ಬಾಕಿ ಇರುತ್ತಾರೋ ಅವರಿಂದ ವಸೂಲಿ ಮಾಡುತ್ತಿದ್ದರೂ ಮತ್ತೇ ಮತ್ತೇ ಬಾಕಿ ಇದ್ದೇ ಇರುತ್ತದೆ. ಆಮೇಲೆ ಕಾಫಿ ಬೋರ್ಡಿನವರ ಬಾಕಿ ವಸೂಲಿ ಮಾಡುವುದಕ್ಕೆ ನಾನು ಮಾನ್ಯ ಸದಸ್ಯರ ಸಹಾಯವನ್ನು ಕೇಳುತ್ತೇನೆ. ಅವರ ಸಹಾಯವೆಂದರೆ ಅವರ ಪಕ್ಷದ್ದು ನಾವೆಲ್ಲರೂ ಹೋಗಿ ಕೇಂದ್ರ ಸರ್ಕಾರದ ಕಾಮರ್ಸ್ ಮಿನಿಸ್ಟ್ರಿಯನ್ನು ಕೇಳೋಣ. ಸುಪ್ರೀಂ ಕೋರ್ಟಿನವರು ಯಾವರೀತಿ ಕೊಡಬೇಕೆನ್ನುವುದನ್ನು ಬರೆದಿದ್ದಾರೆ ಎಷ್ಟು ದಿವಸದಲ್ಲಿ ಕೊಡಬೇಕೆನ್ನುವುದು ಬರೆದಿದ್ದಾರೆ. ಯಾವ ಬಡ್ಡಿ ಕೊಡಬೇಕೆನ್ನುವುದು ಬರೆದಿದ್ದಾರೆ. ಒಟ್ಟು ಎಲ್ಲಾ ಸೇರಿದರೆ ಅವರಿಂದ ನಮಗೆ ನೂರು ಕೋಟಿ ರೂಪಾಯಿಗಳು ಬರಬೇಕಾಗುತ್ತದೆ ಆ ಹಣ ಬಂದರೆ ನಮಗೆ ಅವಶ್ಯಕವಾಗಿ ಕೆಲವು ಯೋಜನೆ ಳನ್ನು ತೆಗೆದುಕೊಳ್ಳುವುದಕ್ಕೆ ಬೇಗ ಅನುಕೂಲವಾಗುತ್ತದೆ. ನಾನು ಆಸೆ ಮಾಡಿದ್ದೇನೆ. ಕೇಂದ್ರ ಸರ್ಕಾರದವರೂ ಯಾವುದೇ ರೀತಿಯಿಂದ ಇದಕ್ಕೆ ಭಂಗ ಮಾಡುವುದಿಲ್ಲವೆಂದು. ಇನ್ನು ಮಾನ್ಯ ಸದಸ್ಯರ ಕೊನೆ ಪ್ರಶ್ನೆಗೆ ಯಾವ ಯಾವ ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಎಂದು ಕೇಳಿದ್ದೀರಿ ಎಂದು ಕೇಳಿದ್ದಾರೆ. ಸುಲಭದಲ್ಲಿ ಯಾವ ಕಾರ್ಯಕ್ರಮವನ್ನು ತೆಗೆದುಕೊಳ್ಳಬಹುದೋ ಆ ಎಲ್ಲಾ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆಂದು ಹೇಳಲು ಇಷ್ಟಪಡುತ್ತೇನೆ. ಕಾಫಿ ಬೋರ್ಡ್‌ನವರು ಕೊಡಬೇಕಾದ ಬಾಕಿ ಕೊಟ್ಟರೆ ಅದಕ್ಕಿಂತ ದೊಡ್ಡ ಮೊತ್ತ ಬೇರೆ ಯಾವುದೂ ಇಲ್ಲ.

ವಂಹಾಜನ್ ವರದಿಯನ್ನು ಅನುಷ್ಠಾನಗೊಳಿಸುವ ಬಗ್ಗೆ

೧೫೯೮. ಶ್ರೀ ಎ. ಬಿ. ದೇಸಾಯಿ (ಧಾರವಾಡ ಗ್ರಾಮೀಣ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವಂಹಾಜನ ಆಯೋಗದ ತೀರ್ಪನ್ನು ಕೇಂದ್ರ ಹಾಗು ರಾಜ್ಯ ಸರ್ಕಾರಗಳು ಒಪ್ಪಿಕೊಂಡಾಗ ವರದಿಯನ್ನು ಅನುಷ್ಠಾನಕ್ಕೆ ತರುವ ಪ್ರಥಮ ಹಂತವಾದ ರಾಜ್ಯ ಪುನರ್ ವಿಂಗಡಣಾ ನಿರ್ಜೀವರ ಕಾಯ್ದೆಯನ್ನು ತಿದ್ದುಪಡಿ ಮಾಡಲು ಅನಿವಶ್ಯಕ ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಅ) ಕೇಂದ್ರ ಸರ್ಕಾರವು ೧೯೫೬ನೇ ರಾಜ್ಯ ಪುನರ್ ವಿಂಗಡಣಾ ಕಾಯ್ದೆಗೆ ತಿದ್ದುಪಡಿ ತರಲು ರಾಜ್ಯ ಸರ್ಕಾರವು ಕೈಗೊಂಡ ಕ್ರಮಗಳೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಭಾರತ ಸರ್ಕಾರವು ಲೋಕಸಭೆಯಲ್ಲಿ ಸೂಕ್ತ ವಿಧೇಯಕವನ್ನು ಮಂಡಿಸುವುದರ ಮೂಲಕ ಮಹಾಜನ ಆಯೋಗದ ಶಿಫಾರಸ್ಸನ್ನು ಅನುಷ್ಠಾನಕ್ಕೆ ತರಲು ಕ್ರಮ ಕೈಗೊಳ್ಳಬೇಕಾಗಿದ್ದು ಈ ದಿಸೆಯಲ್ಲಿ ವಿಳಂಬವಾಗಿದೆ.

ಆ) ಕರ್ನಾಟಕ ಸರ್ಕಾರವು ಮಹಾಜನ ವರದಿಯನ್ನು ಅನುಷ್ಠಾನಕ್ಕೆ ತರಬೇಕೆಂದು ದೃಢವಾಗಿ ಭಾರತ ಸರ್ಕಾರವನ್ನು ಒತ್ತಾಯಿಸುತ್ತಿದೆ. ಈ ವಿಷಯದಲ್ಲಿ ದಿನಾಂಕ ೨೦-೮-೧೯೫೫, ೧೧-೯-೧೯೫೫ ಮತ್ತು ೯-೧೦-೧೯೫೫ ರಂದು ಮೂರು ಪತ್ರಗಳನ್ನು ಪ್ರಧಾನ ಮಂತ್ರಿಯವರಿಗೆ ಬರೆಯಲಾಗಿದ್ದು, ಮಹಾಜನ ವರದಿ ಅಂತಿಮವೆಂದು ಇದನ್ನು ಅನುಷ್ಠಾನಕ್ಕೆ ತರದಿದ್ದರೆ, ಕರ್ನಾಟಕಕ್ಕೆ ತೀವ್ರ ಅನ್ಯಾಯವಾಗುವುದೆಂದೂ ಮನವರಿಕೆ ಮಾಡಿಕೊಡ ಲಾಗಿದೆ.

ಮಹಾಜನ ವರದಿಯನ್ನು ಸಂಪೂರ್ಣವಾಗಿ ಅನುಷ್ಠಾನಕ್ಕೆ ತರಬೇಕೆಂದು ಭಾರತ ಸರ್ಕಾರವನ್ನು ಒತ್ತಾಯಿಸುವ ಒಮ್ಮತದ ನಿರ್ಣಯಗಳನ್ನು ಕರ್ನಾಟಕ ವಿಧಾನ ಸಭೆ ಮತ್ತು ವಿಧಾನ ಪರಿಷತ್ತುಗಳು ಕ್ರಮವಾಗಿ ದಿನಾಂಕ ೨೨-೩-೧೯೫೬ ಹಾಗೂ ೨೬-೩-೧೯೫೬ ರಂದು ಅಂಗೀಕರಿಸಿವೆ. ಅಲ್ಲದೇ ಸರ್ವಪಕ್ಷೀಯ ಶಾಸಕರ ನಿಯೋಗವೊಂದನ್ನು ಪ್ರಧಾನ ಮಂತ್ರಿಗಳ ಬಳಿ ಆದಷ್ಟು ಜಾಗೃತೆ ಕೊಂಡೊಯ್ಯಲು ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಪಿ. ಬಿ. ದೇಸಾಯಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿಯವರೆವಿಗೂ ಪತ್ರಗಳನ್ನು ಬರೆದಿದ್ದಾರೆ. ಈ ಸದನದಲ್ಲಿ ರೆಜಲ್ಯೂಷನ್ಸ್ ಪಾಸ್ ಮಾಡಿದ್ದಾರೆ ಇಷ್ಟಾದರೂ ಪ್ರಭಾವವೇನೂ ಅವರ ಮೇಲೆ ಬೀರಲಿಲ್ಲ. ಮುಂದೆ ಯಾವ ವಿಚಾರವನ್ನು ತಾವಿಟ್ಟುಕೊಂಡಿದ್ದಾರೆ ಎನ್ನುವುದನ್ನು ತಿಳಿಸಬೇಕು ?

ಶ್ರೀ ರಾಮಕೃಷ್ಣ ಹೆಗಡೆ.—ಈ ಮನೆಯಲ್ಲಿ ಒಂದು ಸಲ ಅಲ್ಲ, ಎರಡು ಸಲ ಅಲ್ಲ, ಮೂರು ಸಲ ತರಾವನ್ನು ಪಾಸ್ ಮಾಡಿ ಕಳುಹಿಸಿಕೊಟ್ಟಿದ್ದೇವೆ. ಇದರ ಜೊತೆಗೆ ಈ ಹಿಂದೆ ಒಂದು ಸಲ ಅಲ್ಲ, ಎರಡು ಸಲ ಅಲ್ಲ, ಮೂರು ಸಲ ಶಾಸಕರ ನಿಯೋಗ ಕೇಂದ್ರಕ್ಕೆ ಹೋಗಿ ಅಂದಿನ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ ಇದನ್ನು ಮನವರಿಕೆ ಮಾಡಿಕೊಡಲಾಗಿದೆ. ಇದರ ಜೊತೆಗೆ ಕಾಲಕಾಲಕ್ಕೆ ಅವರಿಗೆ ಪತ್ರಗಳನ್ನು ಬರೆಯುತ್ತಿದ್ದೇವೆ. ಇದರ ಮೇಲೆ ಮತ್ತೆ ಏನು ಕ್ರಮ ಕೈಕೊಂಡಿದ್ದೀರಿ ಎಂದು ಕೇಳಿದರೆ ಅದಕ್ಕೆ ಏನು ಉತ್ತರ ಹೇಳುವುದು ? ಇಷ್ಟಾದ ಮೇಲೂ ಅವರ ಮೇಲೆ ಈ ಬಗ್ಗೆ ಪ್ರಭಾವ ಬೀರದಿದ್ದರೆ ಈ ಮನೆಯ ಒಮ್ಮತದ ತರಾವು ಸಹ ಅವರ ಮೇಲೆ ಪ್ರಭಾವ ಬೀರದಿದ್ದರೆ ಮತ್ತೆ, ಏನು ಮಾಡಬಹುದು ? ನಮ್ಮಲ್ಲಿ ಸೈನ್ಯ ಇಲ್ಲ, ಸೈನ್ಯ ಇದ್ದಿದ್ದರೆ ಅದನ್ನು ಕಳುಹಿಸಿಕೊಡಬಹುದು ಅಷ್ಟೆ.

ಕೊಣ್ಣೂರಿನಲ್ಲಿ ಬಸ್ ನಿಲ್ದಾಣವನ್ನು ನಿರ್ಮಿಸುವುದು

೧೫೭೦ ಶ್ರೀ ಎಂ ಎಲ್. ಮುತ್ತಣ್ಣನವರ್ (ಗೋಕಾಕ್).—ಮಾನ್ಯ ಸಾರಿಗೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೊಣ್ಣೂರಿಗೆ ಬಸ್ ನಿಲ್ದಾಣವು ಮಂಜೂರಾಗಿದ್ದು ಇನ್ನು ಕೆಲಸ ಪ್ರಾರಂಭ ಮಾಡದಿರಲು ಕಾರಣಗಳೇನು ?

ಆ) ಯಾವಾಗ ಅದನ್ನು ಪ್ರಾರಂಭ ಮಾಡಲಾಗುವುದು ?

ಶ್ರೀ ಪಿ ಜಿ. ಆರ್. ಸಿಂಧ್ಯ (ಸಾರಿಗೆ ಮಂತ್ರಿಗಳು).—

ಅ) ಕ.ರಾ.ರ.ಸಾ. ಸಂಸ್ಥೆಯು ಕೊಣ್ಣೂರಿನಲ್ಲಿ ತಂಗು ದಾಣವನ್ನು ನಿರ್ಮಿಸಲು ಯೋಚಿಸಿದೆ.

ಆ) ಆರ್ಥಿಕ ಅನುಕೂಲತೆಗಳನ್ನು ಗಮನಿಸಿ ಸೂಕ್ತ ನಿವೇಶನವನ್ನು ಪಡೆದ ನಂತರ ತಂಗುದಾಣವನ್ನು ನಿರ್ಮಿಸಲಾಗುವುದು.